# ಅಭ್ಯಾಸ

ಅ. ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಅಕ್ಬರ್ ಮತ್ತು ಬೀರಬಲ್ ಇವರ ನಡುವಿನ ಸಂಬಂಧ ಯಾವ ರೀತಿಯದು?

ಉ. ಅಕ್ಬರ್ ಮತ್ತು ಬೀರಬಲ್ ಇವರ ನಡುವೆ ಆತ್ಮೀಯವಾದ ಸ್ನೇಹದ ಸಂಬಂಧವಾಗಿತ್ತು.

2. ಅಕ್ಬರ್ ಬೀರಬಲ್ಲನನ್ನು ಏಕೆ ಹುಡುಕಾಡಿಸಿದನು?

ಉ. ಅಕ್ಬರನಿಗೆ ಕೆಲ ದಿನಗಳ ನಂತರ ಬೀರಬಲ್ಲನನ್ನು ಕಾಣುವ ತವಕ ಉಂಟಾದ್ದರಿಂದ ಬೀರಬಲ್ಲನನ್ನು ಹುಡುಕಾಡಿಸಿದನು.

3. ಅರಮನೆಯನ್ನು ಪ್ರವೇಶಿಸಿದ ಸಾಧು ಹೇಗಿದ್ದನು?

ಉ. ಅರಮನೆಯನ್ನು ಪ್ರವೇಶಿಸಿದ ಸಾಧು ತುಂಬಾ ತೇಜಸ್ವಿಯಾಗಿದ್ದನು. ಅವನು ತುಂಬಾ ಬುದ್ಧಿವಂತನಾಗಿದ್ದನು.

4. ಅಕ್ಬರನ ಆಸ್ಥಾನದಲ್ಲಿದ್ದ ವಿದ್ವಾಂಸರುಗಳ ಹೆಸರುಗಳೇನು?

ಉ. ಅಕ್ಬರನ ಆಸ್ಥಾನದಲ್ಲಿ ತಾನ್‌ಸೇನ್, ತೋಡರಮಲ್ಲ, ಅಬುಲ್ ಫಜಲ್, ಫೈಜಿ ಮೊದಲಾದ ವಿದ್ವಾಂಸರಿದ್ದರು.

5. ವಿಶ್ವದಲ್ಲಿ ಅತ್ಯುತ್ತಮವಾದ ವಸ್ತು ಯಾವುದು?

ಉ. ವಿಶ್ವದಲ್ಲಿ ಅತ್ಯುತ್ತಮವಾದ ವಸ್ತು ಜ್ಞಾನ.

6. ಕಳೆದು ಹೋದವುಗಳನ್ನು ಮತ್ತೆ ಪಡೆಯಲು ಸಾಧ್ಯವಾಗದೇ ಇರುವವು ಯಾವುವು?

ಉ. ಕಳೆದು ಹೋದವುಗಳನ್ನು ಮತ್ತೆ ಪಡೆಯಲು ಸಾಧ್ಯವಾಗದೇ ಇರುವವು ಜೀವ, ಅವಕಾಶ ಮತ್ತು ಸಮಯ.

Scanned with CamScanner

## 6 ಮಿತ್ರರ ಸಮಾಗಮ

ಆ. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

**1. ಬೀರಬಲ್ ಅಕ್ಬರನಿಗೆ ಕಾಣದಂತೆ ಏಕೆ ಮರೆಯಾಗಿದ್ದನು?**

ಉ. ಒಮ್ಮೆ ಅಕ್ಬರ್ ಮಹಾಶಯನಿಗೆ ಬೀರಬಲ್ಲನ ಮೇಲೆ ಯಾವುದೋ ಕಾರಣಕ್ಕೆ ಅಸಮಾಧಾನ ಉಂಟಾಯಿತು "ನಿನ್ನ ಮುಖವನ್ನು ತೋರಿಸಬೇಡ ಎಲ್ಲಿಗಾದರೂ ಹೊರಟು ಹೋಗು" ಎಂದು ಬೀರಬಲ್‌ಗೆ ಆದೇಶಿಸಿದ ಬೀರ್‌ಬಲ್ ಯಾರಿಗೂ ಕಾಣದಂತೆ ಮರೆಯಾದ.

**2. ಸೇವಕನು ಸಾಧುವಿನ ಬಗ್ಗೆ ಅಕ್ಬರನಲ್ಲಿಗೆ ಬಂದು ಏನೆಂದು ಹೇಳಿದನು?**

ಉ. ಸೇವಕನು ಸಾಧುವಿನ ಬಗ್ಗೆ ಅಕ್ಬರನಲ್ಲಿಗೆ ಬಂದಾ "ಪ್ರಭು ಅರಮನೆಯ ದ್ವಾರದಲ್ಲಿ ಒಬ್ಬ ಸಾಧು ಅವರ ಶಿಷ್ಯರೊಂದಿಗೆ ಬಂದಿದ್ದಾರೆ, ಅವರು ವಿಶ್ವದಲ್ಲೇ ದೊಡ್ಡ ಮೇಧಾವಿ ಹಾಗೂ ತುಂಬಾ ಬುದ್ಧಿವಂತರೆಂದು ಹೇಳುತ್ತಿದ್ದಾರೆ" ಎಂದು ಹೇಳಿದನು.

**3. ಅರಮನೆಯನ್ನು ಪ್ರವೇಶಿಸಿದ ಸಾಧುವಿಗೆ ಅಕ್ಬರ್ ಏನೆಂದು ಹೇಳಿದನು?**

ಉ. ಅರಮನೆಯನ್ನು ಪ್ರವೇಶಿಸಿದ ಸಾಧುವಿಗೆ ಅಕ್ಬರ್ "ಸಾಧು! ನೀನು ಬಹಳ ಬುದ್ಧಿವಂತನೆಂದು ಕೇಳಿದ್ದೆ, ದಿನ್ನನ್ನು ಪರೀಕ್ಷಿಸುವ ಸಲುವಾಗಿ ಆಸ್ಥಾನದ ಪಂಡಿತರು ನಿನಗೆ ಪ್ರಶ್ನೆಗಳನ್ನು ಕೇಳಲಿ ಹೇಳುತ್ತೇನೆ. ಸರಿಯಾಗಿ ಉತ್ತರಿಸಿದರೆ ಅಮೂಲಗಳಿಂದಾದ ಉಡುಗೊರೆಗಳನ್ನು ನೀಡುತ್ತೇವೆ". ಎಂದು ಹೇಳಿದನು.

**4. ಮಾನ್‌ಸಿಂಗ್‌ನ ಪ್ರಶ್ನೆಗಳಿಗೆ ಸಾಧುವಿನ ಉತ್ತರಗಳೇನು?**

ಉ. ಮಾನ್‌ಸಿಂಗ್‌ನ ಪ್ರಶ್ನೆಗಳಿಗೆ ಸಾಧು ವ್ಯಕ್ತಿಯ ಅತ್ಯುತ್ತಮ ಸಾಮರ್ಥ್ಯ ಆತನ ಧೈರ್ಯ. ವಾರುತಕ್ಕಿಂತ ವೇಗವಾದುದು ಮನುಷ್ಯನ ಕಲ್ಪನೆ. ಅತ್ಯಂತ ಸಿಹಿಯಾದದ್ದು ಮಗುವಿನ ನಗು.

**5. ಸಾಧುವಿನ ಉತ್ತರಗಳಿಂದ ಸಂತಸಪಟ್ಟ ಅಕ್ಬರ್ ಏನು ಹೇಳಿದನು?**

ಉ. ಸಾಧುವಿನ ಉತ್ತರಗಳಿಂದ ಸಂತಸಪಟ್ಟ ಅಕ್ಬರ್, ಅವನಿಗೆ ತನ್ನ ಆಸ್ಥಾನದಲ್ಲಿ ಒಂದು ಸ್ಥಾನವನ್ನು ಕೊಡುವುದಾಗಿ ಹೇಳಿದ. "ಅಯ್ಯಾ ಸಾಧುಗಳಿಗೆ ವಿಶೇಷ ಶಕ್ತಿಗಳಿರುತ್ತವೆ ಎಂದು ಕೇಳಿದ್ದೇನೆ. ನಿನಗೆ ಅಂಥ ಯಾವುದಾದರೂ ಶಕ್ತಿ ಇದೆಯೇ?" ಎಂದು ಪ್ರಶ್ನಿಸಿದ.

**6. ಅಕ್ಬರನಿಗೆ ಸಾಧು ತನ್ನ ನಿಜರೂಪವನ್ನು ಹೇಗೆ ತೋರಿದನು?**

ಉ. ಅಕ್ಬರನಿಗೆ ಸಾಧು ತನ್ನ ನಿಜರೂಪವನ್ನು ತನ್ನ ಗಡ್ಡ ಮೀಸೆಗಳನ್ನು ನಿಧಾನವಾಗಿ ಕಳಚಿ ತೋರಿಸಿದನು.

Scanned with CamScanner